ಸಾಕ್ಷಿಯನ್ನು ದಿಃ **08.07.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಂ.ಬಿ. ವಕೀಲರಿಂದಃ-

ನನ್ನ ವಾದ ಪತ್ರದ ಪ್ಯಾರಾ ನಂಬರ 2ರಲ್ಲಿ ಕಾಣಿಸಿರುವ ವಂಶವೃಕ್ಷದ ಬಗ್ಗೆ ಕಂದಾಯ ಇಲಾಹೆಯಲ್ಲಿ ಆರ್.ಡಿ. ವಂಶವೃಕ್ಷ ಮಾಡಿಸಿಲ್ಲ. ಸದರಿ ಪ್ಯಾರಾ ನಂಬರ 2ರಲ್ಲಿ ಕಾಣಿಸಿರುವ ವಂಶವೃಕ್ಷದಲ್ಲಿ ಇರುವವರೆಲ್ಲರೂ ಕರೀಗೌಡರ ವಂಶಸ್ತರು ಎಂದು ತೋರಿಸಲು ಆರ್.ಡಿ. ವಂಶವೃಕ್ಷ ಹಾಜರುಪಡಿಸಲು ತೊಂದರೆ ಇಲ್ಲ. ಕರೀಗೌಡರು ಯಾವಾಗ ಮರಣ ಹೊಂದಿದ್ದಾರೆ ಎಂಬ ಬಗ್ಗೆ ವಾದಪತ್ರದಲ್ಲಿ ಬರೆಸಲು ತೊಂದರೆ ಇತ್ತೆ ಎಂದರೆ ಅವರು ಮೃತಪಟ್ಟ ದಿನಾಂಕ ನನಗೆ ಗೊತ್ತಿರಲಿಲ್ಲ, ನಾನು ಇನ್ನೂ ಹುಟ್ಟಿರಲಿಲ್ಲ. ಕರೀಗೌಡರ ಪತ್ನಿ ಯಾರು ಎಂದು ವಾದ ಪತ್ರದಲ್ಲಿ ತೋರಿಸಿದ ವಂಶವೃಕ್ಷದಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ. ಕರೀಗೌಡರ ಹೆಂಡತಿ ಯಾವಾಗಗ ಮರಣ ಹೊಂದಿದ್ದಾರೆಂದು ವಾದಪತ್ರದಲ್ಲಿ ಬರೇಸಿದ್ದೀರಾ ಎಂದರೆ ಅವರು ಮರಣ ಹೊಂದಿದ ಬಗ್ಗೆ ನನಗೆ ಗೊತ್ತಿರಲಿಲ್ಲ.

ದಾವೆ ಸಲ್ಲಿಸುವ ಎಷ್ಟು ವರ್ಷಗಳ ಪೂರ್ವದಲ್ಲಿ ಕರೀಗೌಡರು ತೀರಿಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ವಾದ ಪತ್ರದ ವಂಶವೃಕ್ಷವನ್ನು ನನ್ನ ಅನಿಸಿಕೆಗೆ ತಕ್ಕಂತೆ ಬರೆಸಿದ್ದೇನೆ ಎಂದರೆ ಸರಿ. ಪುಟ್ಟಲಕ್ಷ್ಮಮ್ಮನವರು 2010ರಲ್ಲಿ ತೀರಿಕೊಂಡಿದ್ದಾರೆ. ದಿನಾಂಕ, ತಿಂಗಳು ನೆನಪಿಲ್ಲ. ಪುಟ್ಟಲಕ್ಷ್ಮಮ್ಮರವರ ಗಂಡನ ಹೆಸರೆನೆಂದು ವಾದ ಪತ್ರದಲ್ಲಿ ಬರೆಸಿಲ್ಲ. ತುಳಸಮ್ಮ ಮತ್ತು ಸಾವಿತ್ರಮ್ಮರವರ ಗಂಡನ ಹೆಸರೆನೆಂದು ವಾದ ಪತ್ರದಲ್ಲಿ ಬರೆಸಿಲ್ಲ. ತುಳಸಮ್ಮ ಮತ್ತು ಸಾವಿತ್ರಮ್ಮ ರವರು ಯಾವಾಗ ಮೃತಪಟ್ಟರೆಂದು ಮರಣ ಪ್ರಮಾಣಪತ್ರವನ್ನು ಕೊಟ್ಟಿದ್ದೇನೆ.

6ನೇ ಪ್ರತಿವಾದಿಯ ತಂದೆಯ ಹೆಸರು ನಾಗರಾಜೇಗೌಡ. 7 ಮತ್ತು 8ನೇ ಪ್ರತಿವಾದಿ ಯರ ತಂದೆಯ ಹೆಸರನ್ನು ವಾದಪತ್ರದ ಶೀರ್ಷಿಕೆಯಲ್ಲಿ ಏಕೆ ಬರೆಸಿಲ್ಲ ಎಂದರೆ ಗೊತ್ತಿಲ್ಲ. ವಾದಪತ್ರದಲ್ಲಿ ಒಟ್ಟು ನಾಲ್ಕು ಪರಿಹಾರಗಳನ್ನು ಕೇಳಿದ್ದೇನೆ ಎಂದರೆ ಗೊತ್ತಿಲ್ಲ. ಯಾವ ಪರಿಹಾರಕ್ಕೆ ರೂ.75/- ನ್ಯಾಯಾಲಯದ ಶುಲ್ಕವನ್ನು ಪಾವತಿಸಿದ್ದೀರಿ ಎಂದರೆ ನನಗೆ ಗೊತ್ತಿಲ್ಲ, ವಕೀಲರಿಗೆ ಗೊತ್ತಿದೆ. ಅಸಲು ದಾವೆ ಸಂಖ್ಯೆ 55/2015ರಲ್ಲಿ ಬಾಲಕೃಷ್ಣರವರು

ಎಷ್ಟು ನ್ಯಾಯಾಲಯದ ಶುಲ್ಕ ಪಾವತಿಸಿದ್ದಾರೆ ಎಂದು ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 55/2015ರಲ್ಲಿ 1ನೇ ಪ್ರತಿವಾದಿಯು ರೂ.72,125/- ನ್ಯಾಯಾಲಯದ ಶುಲ್ಕ ಪಾವತಿಸಿದ್ದಾರೆ ಎಂದರೆ ಸರಿ. ದಿನಾಂಕ 25.03.2015ರಂದು ಚಾಲ್ತಿಯಲ್ಲಿದ್ದ ಮಾರುಕಟ್ಟೆ ಬೆಲೆಗೆ 1ನೇ ಪ್ರತಿವಾದಿಯು ನ್ಯಾಯಾಲಯದ ಶುಲ್ಕ ಪಾವತಿಸಿದ್ದಾರೆ ಎಂದರೆ ಗೊತ್ತಿಲ್ಲ.

ದಿನಾಂಕ 04.01.2023ರಂದು ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ವಕೀಲರಿಗೆ ಹೇಳಿದ್ದೆವು. ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಪಹಣಿಗಳಾದ ನಿಪಿ-14 ರಿಂದ 25, 1 ಮತ್ತು 2ನೇ ಪ್ರತಿವಾದಿಯರ ಹೆಸರಿನಲ್ಲಿತ್ತು ಎಂದರೆ ಸರಿ. ನಾವು ಕೂಡ ದಾವಾ ಸ್ವತ್ತಿನ ಜಂಟೀ ಸ್ವಾಧೀನದಲ್ಲಿದ್ದೆವು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಜಂಟೀ ಪಹಣಿಗಳನ್ನು ಹಾಜರುಪಡಿಸಿದ್ದೇನೆ. 1995 ರಿಂದ 2000 ವರೆಗಿನ ಪಹಣಿಗಳನ್ನು ಹಾಜರು ಪಡಿಸಿದ್ದೇನೆ. ದಾವೆ ಹಾಕುವ ದಿನಾಂಕದಂದು ದಾವಾ ಸ್ವತ್ತುಗಳು ನಮ್ಮ ಪೂರ್ವಿಕರ ಅಥವಾ ನಮ್ಮ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ತಾಯಿಯ ಹೆಸರಿನಲ್ಲಿದ್ದ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿ ನಮಗೆ ತೊಂದರೆ ಕೊಡುತ್ತಿದ್ದಾರೆಂದು ದಿನಾಂಕ 05.01.2018 ರಂದು ಹುಣಸೂರಿನ ಪ್ರಧನಾ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 05/2018ನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ದಾವೆ ಸಲ್ಲಿಸಿದ ದಿನಾಂಕದಿಂದ ದಾವೆ ಕೊನೆಗೊಳ್ಳುವವರೆಗೆ ದಾವಾ ಸ್ವತ್ತಿನ ನಮ್ಮ ಸ್ವಾಧೀನಕ್ಕೆ 1ನೇ ಪ್ರತಿವಾದಿ ತೊಂದರೆ ಕೊಡಬಾರದೆಂದು ಮಧ್ಯಂತರ ಪ್ರತಿಬಂಧಕಾಜ್ಞೆ ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಅಸಲು ದಾವೆ ಸಂಖ್ಯೆ 05/2018ರಲ್ಲಿ ಸಲ್ಲಿಸಿದ ನಮ್ಮ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯವು ದಿನಾಂಕ 11.04.2018ರಂದು ವಜಾ ಮಾಡಿತು ಎಂದರೆ ಇಲ್ಲ.

ದಿನಾಂಕ 11.04.2018ರಂದು ಮಧ್ಯಂತರ ಅರ್ಜಿ ವಜಾಗೊಂಡ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ನನ್ನ ಗಮನಕ್ಕೆ ಅದು ಬಂದಿಲ್ಲ. ದಿನಾಂಕ 11.04.2018ರ ಆದೇಶದ ಬಗ್ಗೆ ನನಗೆ ಗೊತ್ತಿದ್ದರೂ ಕೂಡ 1 ಮತ್ತು 2ನೇ

ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂದು ಅವರ ವಿರುದ್ಧ ಪುನಃ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 05/2018 ನ್ನು ಸಲ್ಲಿಸಿದ್ದೆವು ಎಂದು ಈ ದಾವೆ ಹಾಕುವ ಕಾಲಕ್ಕೆ ವಕೀಲರಿಗೆ ಮಾಹಿತಿ ಕೊಟ್ಟಿದ್ದೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ವಿಷಯ ಮಾತ್ರ ತಿಳಿಸಿದ್ದೇನೆ.

ಮುಂದುವರೆದ ಪಾಟೀ ಸವಾಲು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.